KAMS510048532014

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 07 ನೇ ಮಾರ್ಚ್ , 2026**

**ಸಿ.ಸಿ./1950/2014**

ಪಿರ್ಯಾದುದಾರರು ರಾಜ್ಯದ ಪರವಾಗಿ
ಕವಲಂದೆ ಠಾಣಾ ಪೊಲೀಸರು.
**(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

ಆರೋಪಿಯುಃ-

1. ಮೂರ್ತಿ ಬಿನ್ ಸಿದ್ದಯ್ಯ 27 ವರ್ಷ
2. ಕಮಲಮ್ಮ ಕೋಂ ಕೆಕ್ಕೆ ಸಿದ್ದಯ್ಯ 55 ವರ್ಷ
3. ಕೆಕ್ಕೆ ಸಿದ್ದಯ್ಯ ಬಿನ್ ಲೇಟ್ ಸಿದ್ದಯ್ಯ(ಮೃತಪಟ್ಟಿರುತ್ತಾರೆ)
4. ನಿಂಗರಾಜು ಬಿನ್ ಕೆಕ್ಕೆ ಸಿದ್ದಯ್ಯ 30 ವರ್ಷ
5. ರೇಖ ಕೋಂ ನಿಂಗರಾಜು 26 ವರ್ಷ
6. ರಂಗಸ್ವಾಮಿ ಬಿನ್ ಲೇಟ್ ದೊಡ್ಡಯ್ಯ (ಮೃತಪಟ್ಟಿರುತ್ತಾರೆ)
7. ಪುಟ್ಟ ಬಿನ್ ಲೇಟ್ ದೊಡ್ಡಯ್ಯ

ಎಲ್ಲರ ವಾಸಃ ಹನುಮನಪುರ ಗ್ರಾಮ, ನಂಜನಗೂಡು ತಾಲ್ಲೂಕು

**(ಆರೋಪಿತರ ಪರ ಪ್ರತಿನಿಧಿಸುವವರು ಶ್ರೀ.ವಿ ಸಿ ., ವಕೀಲರು)**

## -::ತೀರ್ಪು::-

ಕವಲಂದೆ ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಅವರುಗಳು ಭಾ.ದಂ.ಸಂಹಿತೆ ಕಲಂ.498-ಎ ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-**

ಕವಲಂದೆ ಪೊಲೀಸ್ ಠಾಣಾ ಸರಹದ್ದು ಹನುಮನಪುರ ಗ್ರಾಮದ ಚಾಸಾ.1 ರವರನ್ನು 1ನೇ ಆರೋಪಿಯು ದಿನಾಂಕ: 25-11-2014 ರಂದು ಹನುಮನಪುರ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದ ಮುಂದೆ ಶಾಸ್ತ್ರೋಕ್ತವಾಗಿ ತಾಳಿ ಕಟ್ಟಿ ಮದುವೆ ಆಗಿದ್ದು ಮದುವೆಯಾದ ಕೆಲವು ದಿನಗಳು ಆರೋಪಿಗಳು ಚಾಸಾ.1 ರವರನ್ನು ಚೆನ್ನಾಗಿಯೇ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ ಆರೋಪಿಗಳು ಸಣ್ಣಪುಟ್ಟ ವಿಚಾರಗಳಿಗೆ ಅಡಿಗೆ ಮಾಡಿಲ್ಲ, ಬಟ್ಟೆ ಹೊಗೆದಿಲ್ಲ, ನೀರು ಕಾಯಿಸಿಲ್ಲ ಮನೆ ಕೆಲಸ ಮಾಡಿಲ್ಲ ಎಂದು ಅವಾಚ್ಯವಾಗಿ ಬೈದು ಕೈಯಿಂದ ಮೈಕೈಗೆ ಹೊಡೆದು ಮಾನಸಿಕ ಹಾಗು ದೈಹಿಕ ಹಿಂಸೆ ನೀಡುತ್ತಿದ್ದು, ದಿನಾಂಕ: 04-07-2014 ಮದ್ಯಾಹ್ನ 3-00 ಗಂಟೆ ಸಮಯದಲ್ಲಿ ಚಾಸಾ.1 ರವರು ತಮ್ಮ ಮನೆಯಲ್ಲಿ ಸ್ನಾನಕ್ಕೆ ನೀರು ಕಾಯಿಸಿಕೊಳ್ಳುತ್ತಿದ್ದಾಗ, 2ನೇ ಆರೋಪಿಯು ಚಾಸಾ.1 ರವರಿಗೆ ನಿಮ್ಮ ಅಪ್ಪನ ಮನೆಯಿಂದ ಸೌದೆ ತಂದು ನೀರು ಕಾಯಿಸಿಕೋ ಎಂದಾಗ, ಚಾಸಾ.1 ರವರು ತನ್ನ ಗಂಡನ ಮನೆಯಲ್ಲಿ

ತಾನು ನೀರು ಕಾಯಿಸಿಕೊಳ್ಳುತ್ತೀನಿ ನೀವು ಯಾರು ಕೇಳಲು ಎಂದಾಗ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರವರ ಮೇಲೆ ಗಲಾಟೆ ಮಾಡಿ ಕೈಯಿಂದ ಮೈಕೈಗೆ ಹೊಡೆದು ಮಾನಸಿಕ ಹಾಗು ದೈಹಿಕ ಹಿಂಸೆ ನೀಡಿ ಚಾಸಾ.1 ರವರನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದು ಕವಲಂದೆ ಪೊಲೀಸ್ ಠಾಣೆಯ ನಿರೀಕ್ಷಕರು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ.498-ಎ ಸಹವಾಚಕ ಕಲಂ.149 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು ಭಾ.ದಂ.ಸಂಹಿತೆ ಕಲಂ. 498-ಎ ಸಹವಾಚಕ ಕಲಂ.149 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣಾ ಪತ್ರ ಸಲ್ಲಿಕೆಯಾದ ನಂತರ ದಂ.ಪ್ರ.ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಲೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಆಪಾದನೆಯ ಸಾರಾಂಶವನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿ ವಿಚಾರಣೆಯ ಸಮಯದಲ್ಲಿ 3 ಮತ್ತು 6 ನೇ ಆರೋಪಿತರು ಮೃತಪಟ್ಟಿದ್ದು, ಅವರ ವಿರುದ್ಧದ ಪ್ರಕರಣವನ್ನು ಕೊನೆಗಾಣಿಸಲಾಗಿರುತ್ತದೆ.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ

17 ಜನ ಸಾಕ್ಷಿದಾರರ ಪೈಕಿ 12 ಜನ ಸಾಕ್ಷಿದಾರರನ್ನು ವಿಚಾರಿಸಿಕೊಂಡು, 11 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಬಂದಂತಹ ಸಾಕ್ಷ್ಯವನ್ನು ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ ಮಾಡಿಕೊಳ್ಳಲಾದ ಹೇಳಿಕೆಯಲ್ಲಿ ಆರೋಪಿತರು ಸಂಪೂರ್ಣವಾಗಿ ನಿರಾಕರಣೆ ಮಾಡಿರುತ್ತಾರೆ. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಿಸಿಕೊಂಡಿರುವುದಿಲ್ಲ.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

**ಅಂಶಗಳು**

1. ಕವಲಂದೆ ಪೊಲೀಸ್ ಠಾಣಾ ಸರಹದ್ದು ಹನುಮನಪುರ ಗ್ರಾಮದ ಚಾಸಾ.1 ರವರನ್ನು 1ನೇ ಆರೋಪಿಯು ದಿನಾಂಕ: 25-11-2014 ರಂದು ಹನುಮನಪುರ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದ ಮುಂದೆ ಶಾಸ್ರ್ರೋಕ್ತವಾಗಿ ತಾಳಿ ಕಟ್ಟಿ ಮದುವೆ ಆಗಿದ್ದು ಮದುವೆಯಾದ ಕೆಲವು ದಿನಗಳು ಆರೋಪಿಗಳು ಚಾಸಾ.1 ರವರನ್ನು ಚೆನ್ನಾಗಿಯೇ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ ಆರೋಪಿಗಳು ಸಣ್ಣಪುಟ್ಟ ವಿಚಾರಗಳಿಗೆ ಅಡಿಗೆ ಮಾಡಿಲ್ಲ, ಬಟ್ಟೆ ಹೊಗೆದಿಲ್ಲ, ನೀರು ಕಾಯಿಸಿಲ್ಲ ಮನೆ ಕೆಲಸ ಮಾಡಿಲ್ಲ ಎಂದು ಅವಾಚ್ಯವಾಗಿ ಬೈದು ಕೈಯಿಂದ ಮೈಕೈಗೆ ಹೊಡೆದು ಮಾನಸಿಕ ಹಾಗು ದೈಹಿಕ ಹಿಂಸೆ ನೀಡುತ್ತಿದ್ದು, ದಿನಾಂಕ: 04-07-2014 ಮದ್ಯಾಹ್ನ 3-00 ಗಂಟೆ ಸಮಯದಲ್ಲಿ ಚಾಸಾ.1 ರವರು ತಮ್ಮ ಮನೆಯಲ್ಲಿ ಸ್ನಾನಕ್ಕೆ ನೀರು

ಕಾಯಿಸಿಕೊಳ್ಳುತ್ತಿದ್ದಾಗ, 2 ನೇ ಆರೋಪಿಯು ಚಾಸಾ.1 ರವರಿಗೆ ನಿಮ್ಮ ಅಪ್ಪನ ಮನೆಯಿಂದ ಸೌದೆ ತಂದು ನೀರು ಕಾಯಿಸಿಕೋ ಎಂದಾಗ, ಚಾಸಾ.1 ರವರು ತನ್ನ ಗಂಡನ ಮನೆಯಲ್ಲಿ ತಾನು ನೀರು ಕಾಯಿಸಿಕೊಳ್ಳುತ್ತೀನಿ ನೀವು ಯಾರು ಕೇಳಲು ಎಂದಾಗ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರವರ ಮೇಲೆ ಗಲಾಟೆ ಮಾಡಿ ಕೈಯಿಂದ ಮೈಕೈಗೆ ಹೊಡೆದು ಮಾನಸಿಕ ಹಾಗು ದೈಹಿಕ ಹಿಂಸೆ ನೀಡಿ ಚಾಸಾ.1 ರವರನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ. ಕಲಂ.498-ಎ ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ?

2. ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆಃ

**ಅಂಶ-1 :ನಕಾರಾತ್ಮಕವಾಗಿ**

**ಅಂಶ-2 :ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಂದ:**

## ಕಾರಣಗಳು

9. **ಅಂಶ 1 ಃ-** ಈ ಪ್ರಕರಣದಲ್ಲಿ ಚಾಸಾ.1 ರವರು ಪ್ರಕರಣದ ಪಿರ್ಯಾದುದಾರರಾಗಿದ್ದು, ಪ್ರಕರಣದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.1 ಎಂದು, ಚಾಸಾ.2 ರಿಂದ 5 ಕೃತ್ಯ ನಡೆದ ಸ್ಥಳದ ಮಹಜರ್ ಸಾಕ್ಷಿದಾರರಾಗಿದ್ದು, ಇವರನ್ನು ಪ್ರಾಸಾ.2 ರಿಂದ 5 ಎಂದು ವಿಚಾರಿಸಿಕೊಳ್ಳಲಾಗಿದ್ದು, ಚಾಸಾ. 6 ರವರು ಈ ಪ್ರಕರಣದಲ್ಲಿ ಪಿರ್ಯಾದಿಯ

ತಾಯಿಯಾಗಿದ್ದು, ಅವರನ್ನು ಪ್ರಾಸಾ.6 ಎಂದು ವಿಚಾರಿಸಿಕೊಳ್ಳಲಾಗಿದ್ದು, ಚಾಸಾ. 8 ರವರು ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಅವರನ್ನು ಪ್ರಾಸಾ.7 ಎಂದು ವಿಚಾರಿಸಿಕೊಳ್ಳಲಾಗಿದ್ದು, ಚಾಸಾ. ರಿಂದ 11 ರವರು ಇತರ ಸಾಕ್ಷಿದಾರರಾಗಿದ್ದು, ಇವರನ್ನು ಪ್ರಾಸಾ.8 ರಿಂದ 10 ಎಂದು ವಿಚಾರಿಸಿಕೊಳ್ಳಲಾಗಿದ್ದು, ಚಾಸಾ.17 ರವರು ತನಿಖಾಧಿಕಾರಿಯಾಗಿದ್ದು, ತನಿಖೆ ಪೂರೈಸಿ ಅಂತಿಮ ವರದಿಯನ್ನು ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.11 ಎಂದು ವಿಚಾರಣೆಗೆ ಒಳಪಡಿಸಲಾಗಿದು, ಚಾಸಾ.16 ರವರು ಈ ಪ್ರಕರಣದಲ್ಲಿ ಭಾಗಶಃ ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರಾಸಾ.12 ಎಂದು ವಿಚಾರಿಸಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಪ್ರಾಸಾ.2 ರಿಂದ 10 ರವರು ಪ್ರತಿಕೂಲ ಸಾಕ್ಷಿಗಳಾಗಿರುತ್ತಾರೆ.

10. ಪ್ರಾಸಾ-1 -ಅನಿತಾ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 25:11:2013 ರಂದು ತಮ್ಮ ಗ್ರಾಮದ ಮಂಟೆಸ್ವಾಮಿ ದೇವಸ್ಥಾನದಲ್ಲಿ ತನ್ನ ಮತ್ತು ಒಂದನೇ ಆರೋಪಿಯ ಮದುವೆಯಾಗಿರುತ್ತದೆ. ಮದುವೆ ಸಮಯದಲ್ಲಿ ಚಾಸಾ. 4, 9 ರಿಂದ 12 ಉಪಸ್ಥಿತರಿದ್ದರು. ಮದುವೆಯಾದ ನಂತರ ತಾನು ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ಒಂದನೇ ಆರೋಪಿ ಮದುವೆಯಾದ ನಂತರ ತನ್ನನ್ನು ಒಂದು ತಿಂಗಳ ಕಾಲ ಚನ್ನಾಗಿ ನೋಡಿಕೊಂಡಿರುತ್ತಾನೆ. ನಂತರ ಒಂದನೇ ಆರೋಪಿ ಓಲೆ, ಚಿನ್ನ ಹಾಗೂ ದುಡ್ಡನ್ನು ತೆಗೆದುಕೊಂಡು ಬಾ ಅಂತ ಹೇಳಿ ತನ್ನ ಜೊತೆಗೆ ಜಗಳವಾಡುತ್ತಿದ್ದ. ಮೂರ್ತಿ ಜೊತೆಗೆ 2 ರಿಂದ 7 ನೇ ಆರೋಪಿತರು ತನ್ನ ಜೊತೆಗೆ ಜಗಳವಾಡುತ್ತಿದ್ದರು. ಆರೋಪಿತರು ತಾನು ತಂದಿರುವ ಸೌದೆ, ತಾನು ತಂದಿರುವ ನೀರಿನಲ್ಲಿ ಸ್ನಾನ ಮಾಡುತ್ತೀಯಾ ಎಂದು 2 ನೇ ಆರೋಪಿ ತನ್ನ ಜೊತೆ ಜಗಳವಾಡುತ್ತಿದ್ದರು. ಆಗ ತಾನು 2 ನೇ ಆರೋಪಿಗೆ ತನ್ನ ಗಂಡ 1 ನೇ ಆರೋಪಿ ಸೌದೆ

ತಂದಿರುತ್ತಾನೆ ಎಂದು ಹೇಳಿದೆ. ಆಗ 2ನೇ ಆರೋಪಿ ನೀನು ಯಾರು ಕೇಳುವುದಕ್ಕೆ ಅಂತ ಕೋಪಗೊಂಡು ತನಗೆ ಸೌದೆಯಿಂದ ಹೊಡೆದಿರುತ್ತಾನೆ. ಇನ್ನುಳಿದ ಆರೋಪಿತರು ತನಗೆ ಮನೆಯಿಂದ ಹೊರಗೆ ಹೋಗು ಅಂತ ಹೇಳಿ ಬೈಯುತ್ತಿದ್ದರು. ಗಲಾಟೆಯಾಗಿ ಸುಮಾರು 3 ವರ್ಷಗಳ ಹಿಂದೆ ಆಗಿದೆ. ಗಲಾಟೆಯು ಮಧ್ಯಾಹ್ನ 3 ಗಂಟೆಯಲ್ಲಿ ಆಗಿದೆ ಆನಂತರ ಕವಲಂದೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಆರೋಪಿತರು ಕೈಗಳಿಂದ ತನ್ನ ಕೈಗೆ ಹೊಡೆದಿರುತ್ತಾರೆ. ದೂರು ನೀಡಿದ ಮರುದಿನ ಕವಲಂದೆ ಪೊಲೀಸರು ಮಹಜರ್ ಬರೆಯಲು ನಮ್ಮ ಗ್ರಾಮದ ಹನುಮಂತಪುರ ಗ್ರಾಮದ ತಮ್ಮ ಮನೆಗೆ ಬಂದರು. ಮಹಜರ್ ಕ್ರಮ ಜರುಗಿಸುವಾಗ ದೊರೆಸ್ವಾಮಿ ಮತ್ತು ಮಹದೇವಸ್ವಾಮಿ ಉಪಸ್ಥಿತರಿದ್ದರು. ಗಲಾಟೆಯಾದ ಸ್ಥಳವನ್ನು ತಾನು ಪೋಲೀಸರಿಗೆ ತೋರಿಸಿರುತ್ತೇನೆ. ಮಹಜರ್‌ನ್ನು ಆ ದಿನ 11.30 ರಿಂದ 12ಗಂಟೆವರೆಗೆ ಬರೆಯಲಾಗಿದೆ. ಅಮಾನತ್ತು ಮಹಜರ್ ಜರುಗಿಸುವಾಗ ಪೊಲೀಸರು ತಮ್ಮ ಮದುವೆಯ ಆಹ್ವಾನಪತ್ರಿಕೆಯನ್ನು ಹಾಗೂ ಮದುವೆ ಛಾಯಾಚಿತ್ರಗಳನ್ನು ಅಮಾನತ್ತು ಪಡಿಸಿಕೊಂಡರು ಎಂದು ನುಡಿದಿರುತ್ತಾರೆ.

11. ಪ್ರಾಸಾ.11 -ಶ್ರೀ.ಜವರಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.08.2014 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 13 ರವರಿಂದ 3ನೇ ಆರೋಪಿಯ ಹೆಸರಿನಲ್ಲಿ ಅಸೆಸ್ ಮೆಂಟ್ ನ ಯಥಾ ನಕಲನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದ ಕಾರಣ ಅದೇ ದಿನ ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

12. ಪ್ರಾಸಾ-12- ಶ್ರೀ.ಮಹೇಶ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.07.2014 ರಂದು ಸಂಜೆ 6.30 ನಾನು ಠಾಣಾ ಉಸ್ತುವಾರಿಯಲ್ಲಿರುವಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 104/2014 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 05.07.2014 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ 1 ನೇ ಆರೋಪಿಯೊಂದಿಗೆ ವಿವಾಹವಾಗಿರುವ ಬಗ್ಗೆ ಹಾಜರುಪಡಿಸಿದ ಒಂದು ಲಗ್ನ ಪತ್ರಿಕೆ ಮತ್ತು ಆರು ಛಾಯಾ ಚಿತ್ರಗಳನ್ನು ಹಾಜರುಪಡಿಸಿದ್ದು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 9 ಗಂಟೆಯಿಂದ 9.30 ರ ಸಮಯದಲ್ಲಿ ಮಹಜರ್ ಮೂಲಕ ಅಮಾನತ್ ಪಡಿಸಿಕೊಂಡಿರುತ್ತೇನೆ. ಅವುಗಳನ್ನು ಪಿ.ಎಫ್. 53/2014 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಕೃತ್ಯ ಸ್ಥಳಕ್ಕೆ ತೆರಳಿ ಚಾಸಾ 1 ರವರು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿದ್ದು ಬೆಳಿಗ್ಗೆ 11.30 ರಿಂದ 12.00 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಸ್ಥಳದಲ್ಲೇ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ 4, 6 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 20.07.2014 ರಂದು ತನಗೆ ವರ್ಗಾವಣೆಯಾದ ಕಾರಣ ಈ ಪ್ರಕರಣದ ಕಡತವನ್ನು ಚಾಸಾ 17 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ.

13. ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ಹೇಳಿಕೆ ನೀಡಿದ ಚಾಸಾ.1 ರವರು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿದ್ದು, ಪ್ರತ್ಯಕ್ಷ ಸಾಕ್ಷಿದಾರರು, ಮಹಜರ್ ಸಾಕ್ಷಿದಾರರು ಮತ್ತು ಇತರ

ಸಾಕ್ಷಿದಾರರಾದ ಪ್ರಾಸಾ.2 ರಿಂದ 10 ರವರು ಈ ಪ್ರಕರಣದ ಬಗ್ಗೆ ಏನೂ ತಿಳಿದಿಲ್ಲ ಎಂದು ಸಾಕ್ಷ್ಯ ನುಡಿದು ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ.11 ಮತ್ತು 12 ರವರು ಈ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ಈ ಪ್ರಕರಣದಲ್ಲಿ ಅವರು ಮಾಡಿರುವ ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ, ಪ್ರತ್ಯಕ್ಷ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿದಾರರಾಗಿದ್ದು, ಕೇವಲ ಪ್ರಾಸಾ.1 ಮತ್ತು ತನಿಖಾಧಿಕಾರಿಗಳ ವಿಚಾರಣೆಯ ಮೇಲೆ ಆರೋಪಿಗಳು ಅಪರಾಧ ಮಾಡಿದ್ದಾರೆಂದು ಸಾಬೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗಿರುವುದಿಲ್ಲ.

14. ಆದ್ದರಿಂದ, ಪ್ರಾಸಾ.1, 11 ಮತ್ತು 12 ರವರ ಸಾಕ್ಷ್ಯವನ್ನು ಆಧರಿಸಿ ಆರೋಪಿತರನ್ನು ತಪ್ಪಿತಸ್ಥರೆಂದು ನಿರ್ಣಯಿಸುವುದು ಸೂಕ್ತ ಕ್ರಮವಾಗಲಾರದು. ಒಟ್ಟಾರೆಯಾಗಿ ಮೇಲಿನ ಎಲ್ಲಾ ಸಾಕ್ಷ್ಯವನ್ನು ತುಲನೆ ಮಾಡಿ ನೋಡಿದಾಗ, ಆರೋಪಿಗಳ ವಿರುದ್ದ ಅಭಿಯೋಜನೆ ಆರೋಪ ಮಾಡಿದಂತ ಯಾವುದೇ ಆರೋಪ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ, ಆರೋಪಿತರ ವಿರುದ್ಧ ಆಪಾದಿಸಲಾದ ದೋಷಾರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ **ಅಂಶ-1** ನ್ನು **ನಕಾರಾತ್ಮಕವಾಗಿ ಉತ್ತರಿಸುತ್ತೇನೆ.**

15. **ಅಂಶ-2:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ದೋಷಾರೋಪಿಸಲಾಗಿರುವಂತಹ ಆಪಾದನೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**-:: ಆದೇಶ ::-**

ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿಯಲ್ಲಿ ಅವರ ವಿರುದ್ಧ ದೋಷಾರೋಪಿಸಲಾದ ಭಾ.ದಂ.ಸಂಹಿತೆ ಕಲಂ. 498-ಎ ಸಹವಾಚಕ ಕಲಂ.149 ರಡಿಯಲ್ಲಿನ ಆಪಾದನೆಗಳಿಗೆ ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

ಆರೋಪಿತರು ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **07 ನೇ ಮಾರ್ಚ್-2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.

**-ಅನುಬಂಧ-**

1. **ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

ಪ್ರಾಸಾ-1 : ಅನಿತಾ

ಪ್ರಾಸಾ-2 : ಮಹದೇವಸ್ವಾಮಿ

ಪ್ರಾಸಾ-3 : ದೊರೆಸ್ವಾಮಿ

| | | |
|---|---|---|
| ಪ್ರಾಸಾ-4 | : | ಕಾಳಯ್ಯ |
| ಪ್ರಾಸಾ-5 | : | ಮಹದೇವಯ್ಯ |
| ಪ್ರಾಸಾ-6 | : | ನಾಗಮ್ಮ |
| ಪ್ರಾಸಾ-7 | : | ಅಂಕಯ್ಯ |
| ಪ್ರಾಸಾ-8 | : | ನಂಜುಂಡಯ್ಯ |
| ಪ್ರಾಸಾ-9 | : | ಕೆಂಪಯ್ಯ |
| ಪ್ರಾಸಾ-10 | : | ರವಿ |
| ಪ್ರಾಸಾ-11 | : | ಜವರಶೆಟ್ಟಿ |
| ಪ್ರಾಸಾ-12 | : | ಮಹೇಶ |

2. **ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳುಃ**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಸಾಕ್ಷಿದಾರರ ರುಜುಗಳು |
| ನಿಪಿ-2 | : | ಸ್ಥಳ ಪಂಚನಾಮೆ |
| ನಿಪಿ-2(ಎ-ಡಿ) | : | ಸಾಕ್ಷಿದಾರರ ರುಜುಗಳು |
| ನಿಪಿ-3 | : | ಅಮಾನತ್ತು ಪಂಚನಾಮೆ |
| ನಿಪಿ-3(ಎ-ಡಿ) | : | ಸಾಕ್ಷಿದಾರರ ರುಜು |
| ನಿಪಿ-4 | : | ಲಗ್ನ ಪತ್ರಿಕೆ |
| ನಿಪಿ-4(ಎ) | : | ಸಾಕ್ಷಿದಾರರ ರುಜು |
| ನಿಪಿ-5 ರಿಂದ 10 | : | ಮದುವೆಯ ಭಾವಚಿತ್ರಗಳು |
| ನಿಪಿ-11 | : | ಪ್ರಾಸಾ.4 ರವರ ಹೇಳಿಕೆ |
| ನಿಪಿ-5 | : | ಪ್ರಾಸಾ.7 ರವರ ಹೇಳಿಕೆ |
| ನಿಪಿ-6 | : | ಪ್ರಾಸಾ.8 ರವರ ಹೇಳಿಕೆ |
| ನಿಪಿ-7 | : | ಪ್ರಾಸಾ.9 ರವರ ಹೇಳಿಕೆ |

ನಿಪಿ-8 : ಪ್ರಾಸಾ.10 ರವರ ಹೇಳಿಕೆ

ನಿಪಿ-9 : ಅಸೆಸ್ ಮೆಂಟ್ ರಿಜಿಸ್ಟರ್

**3. ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳುಃ**

- ಇಲ್ಲಾ -

**4. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

**5. ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,

**ನಂಜನಗೂಡು**